**ದಿನಾಂಕ 03.01.2011 ರಂದು ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರ ಅಧ್ಯಕ್ಷತೆಯಲ್ಲಿ ಕೊಠಡಿ ಸಂಖ್ಯೆ 406, 4ನೇ ಮಹಡಿ ಕೊಠಡಿ ಸಂಖ್ಯೆ.406, ವಿಕಾಸ ಸೌಧ, ಬೆಂಗಳೂರಿನಲ್ಲಿ ನಡೆದ ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ರಾಯಚೂರಿನ 11ನೇ ಆಡಳಿತ ಮಂಡಳಿ ಸಭೆಯ ಸಭಾ ನಡುವಳಿಗಳು.**

**ಸಭೆಯಲ್ಲಿ ಹಾಜರಿದ್ದ ಸದಸ್ಯರು**

1. ಶ್ರೀ ರಾಮದಾಸ್ – ಅಧ್ಯಕ್ಷರು
   ವೈದ್ಯಕೀಯ ಶಿಕ್ಷಣ ಸಚಿವರು,
   ಕರ್ನಾಟಕ ಸರ್ಕಾರ, ಬೆಂಗಳೂರು.

2. ಶ್ರೀ ಐ.ಎಂ. ವಿಠ್ಠಲ್ ಮೂರ್ತಿ – ಉಪಾಧ್ಯಕ್ಷರು
   ಸರ್ಕಾರದ ಕಾರ್ಯದರ್ಶಿಗಳು,
   ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ (ವೈ.ಶಿ),
   ಬೆಂಗಳೂರು.

3. ಶ್ರೀ ಗಣೇಶ್‌ಮೂರ್ತಿ, – ಸದಸ್ಯರು
   ಉಪ ಕಾರ್ಯದರ್ಶಿಗಳು,
   ಆರ್ಥಿಕ ಇಲಾಖೆ, ಬೆಂಗಳೂರು

4. ಡಾ. ಎ. ಆರ್. ಅರುಣಾ – ಸದಸ್ಯರು.
   ನಿರ್ದೇಶಕರು ವೈದ್ಯಕೀಯ ಶಿಕ್ಷಣ, ಬೆಂಗಳೂರು.

5. ಶ್ರೀ ಡಿ.ಎನ್. ನಾಯಕ್ , – ಸದಸ್ಯರು
   ಆಯುಕ್ತರು,
   ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ,
   ಬೆಂಗಳೂರು

6. ಶ್ರೀ ಪ್ರೇಮ್ ಕುಮಾರ್, ಕುಲಪತಿಗಳು, – ಸದಸ್ಯರು
   ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವ ವಿದ್ಯಾಲಯ,
   ಜಯನಗರ, ಬೆಂಗಳೂರು
   ರಾಯಚೂರು

7. ಡಾ. ಟಿ.ಎಂ. ನಟರಾಜ್ – ಸದಸ್ಯರು
   ವೈದ್ಯಕೀಯ ಅಧೀಕ್ಷಕರು, ಭೋಧಕ ಆಸ್ಪತ್ರೆ, ರಾಯಚೂರು.

8. ಶ್ರೀ ಸತೀಶ್, ಕಾನೂನು ಸಲಹೆಗಾರರು, – ವಿಶೇಷ ಅಹ್ವಾನಿತರು
   ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ,
   ರಾಯಚೂರು.

9. ಡಾ. ರಾಮಯ್ಯ – ಸದಸ್ಯ ಕಾರ್ಯದರ್ಶಿ
   ನಿರ್ದೇಶಕರು, ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
   ರಾಯಚೂರು.

ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು, ಕರ್ನಾಟಕ ಸರ್ಕಾರ ಹಾಗೂ ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ, ಅಧ್ಯಕ್ಷರಾದ ಸನ್ಮಾನ್ಯ ಶ್ರೀ ರಾಮದಾಸ್‌ರವರು ಸಭೆಯಲ್ಲಿ ಹಾಜರಿದ್ದ ಎಲ್ಲಾ ಸದಸ್ಯರನ್ನು ಸ್ವಾಗತಿಸಿ ಸಭೆಯನ್ನು ಪ್ರಾರಂಭಿಸಿದರು.

ಸಭೆಯಲ್ಲಿ ಅಧ್ಯಕ್ಷರ ಸಮಕ್ಷಮದಲ್ಲಿ ತೆಗೆದುಕೊಂಡ ನಿರ್ಣಯಗಳು ಈ ಕೆಳಗಿನಂತಿವೆ.

**ವಿಷಯ ಸೂಚಿ ಸಂಖ್ಯೆ. 1 : ದಿನಾಂಕ 21.08.2010ರಂದು ಜರುಗಿದ 10ನೇ ಆಡಳಿತ ಮಂಡಳಿ ಸಭೆಯ ಸಭಾ ನಡುವಳಿಗಳನ್ನು ಓದಿ ದಾಖಲಿಸುವುದು ಮತ್ತು ಅನುಪಾಲನ ವರದಿಯನ್ನು ಅನುಮೋದಿಸುವುದು.**

ದಿನಾಂಕ 21.08.2010ರಂದು ಜರುಗಿದ 10ನೇ ಆಡಳಿತ ಮಂಡಳಿಯ ಸಭಾ ನಡುವಳಿಗಳನ್ನು ಓದಿ ದಾಖಲಿಸಿ ಅನುಪಾಲನ ವರದಿಯನ್ನು ಆಡಳಿತ ಮಂಡಳಿಯು ಅನುಮೋದಿಸಲಾಯಿತು.

**ವಿಷಯ ಸೂಚಿ ಸಂಖ್ಯೆ. 2 : ಡಾ. ವಿ.ಬಿ. ಮಾಲ್ವಿ ಪಾಟೀಲ್, ಸಹ ಪ್ರಾಧ್ಯಾಪಕರು, ಶಸ್ತ್ರ ಚಿಕಿತ್ಸಾ ವಿಭಾಗ ಹಾಗು ಡಾ. ಪುಷ್ಪಾ ಎಸ್. ಡವಳಗಿ, ಸಹ ಪ್ರಾಧ್ಯಾಪಕರು, ಪ್ರಸೂತಿ ಮತ್ತು ಸ್ತ್ರೀ ರೋಗ ವಿಭಾಗ ಇವರ ವೇತನ ಪರಿಷ್ಕರಣೆ ಮತ್ತು ವೇತನ ಪಾವತಿ ಬಗ್ಗೆ**

ಡಾ. ವಿ.ಬಿ.ಮಾಲ್ವಿ ಪಾಟೀಲ್, ಸಹ ಪ್ರಾಧ್ಯಾಪಕರು, ಶಸ್ತ್ರ ಚಿಕಿತ್ಸಾ ವಿಭಾಗ ಹಾಗು ಡಾ. ಪುಷ್ಪ ಡವಳಗಿ, ಸಹ ಪ್ರಾಧ್ಯಾಪಕರು, ಪ್ರಸೂತಿ ಮತ್ತು ಸ್ತ್ರೀರೋಗ ತಜ್ಞ ವಿಭಾಗ ಇವರುಗಳು ಭಾರತೀಯ ವೈದ್ಯಕೀಯ ಮಂಡಳಿಯ ನಿಯಮಾವಳಿಯಂತೆ ಸಹ ಪ್ರಾಧ್ಯಾಪಕರ ಹುದ್ದೆಗೆ ಅರ್ಹರಿಲ್ಲದ ಕಾರಣ ಸದರಿ ವೈದ್ಯರುಗಳನ್ನು ಸಹಾಯಕ ಪ್ರಾಧ್ಯಾಪಕರುಗಳೆಂದು ಪರಿಗಣಿಸಿ ಡಾ. ವಿ.ಬಿ. ಮಾಲ್ವಿ ಪಾಟೀಲ್‌ರವರ ಮೂಲ ವೇತನ ರೂ. 12,840/-ನ್ನು ಸಂರಕ್ಷಿಸಿ ಹಾಗು ಡಾ. ಪುಷ್ಪ ಡವಳಗಿ ಇವರ ವೇತನವನ್ನು AICTE ವೇತನ ಶ್ರೇಣಿಯ ಮೂಲ ವೇತನ (12,000 – 420 –18,300/-) ವನ್ನು ನಿಗದಿಪಡಿಸಿ ಪಾವತಿಸಲು ಆಡಳಿತ ಮಂಡಳಿಯು ಅನುಮೋದಿಸಲಾಯಿತು.

**ವಿಷಯ ಸೂಚಿ ಸಂಖ್ಯೆ. 3 : ವಿಧಿವೈದ್ಯ ಶಾಸ್ತ್ರದಲ್ಲಿ ಕಾರ್ಯನಿರ್ವಹಿಸುತ್ತಿರುವ ವೈದ್ಯರಿಗೆ ಗೌರವ ಧನ ನೀಡುವ ಬಗ್ಗೆ**

ಸರ್ಕಾರಿ ಆದೇಶ ಸಂಖ್ಯೆ ಆಕುಕ / 711 / ಆಯೋಸಂ 03 (ಭಾಗ) ಬೆಂಗಳೂರು, ದಿನಾಂಕ 17.09.2003ರನ್ವಯ ವಿಧಿ ವೈದ್ಯ ಶಾಸ್ತ್ರ ವಿಭಾಗದಲ್ಲಿ ಮರಣೋತ್ತರ ಶವ ಪರೀಕ್ಷೆಯನ್ನು ನಡೆಸುತ್ತಿರುವ ವೈದ್ಯರು ಹಾಗು ಸಿಬ್ಬಂದಿಗೆ ಸಂಜೆ 6 ಗಂಟೆಯಿಂದ ಬೆಳಿಗ್ಗೆ 6 ಗಂಟೆಯವರೆಗೆ ಮರಣೋತ್ತರ ಶವ ಪರೀಕ್ಷೆ ನೆಡೆಸುವ ವೈದ್ಯರು ಮತ್ತು ಸಿಬ್ಬಂದಿಗೆ ಅನುಕ್ರಮವಾಗಿ ರೂ. 500/- ಹಾಗು ರೂ. 250/-ಗಳ ಗೌರವಧನವನ್ನು ಪಾವತಿಸಲು ಆಡಳಿತ ಮಂಡಳಿಯು ಅನುಮೋದಿಸಲಾಯಿತು.

**ವಿಷಯ ಸೂಚಿ ಸಂಖ್ಯೆ. 4 : ದಿನಾಂಕ 15.12.2010ರಂದು ಬೋಧಕ ಸಿಬ್ಬಂದಿಯವರ ನೇಮಕಾತಿ ಕುರಿತು ಜರುಗಿದ ಸಭಾ ನಡುವಳಿಗಳನ್ನು ಅನುಮೋದಿಸುವ ಬಗ್ಗೆ.**

2011-12ನೇ ಸಾಲಿನ ಭಾರತೀಯ ವೈದ್ಯಕೀಯ ಮಂಡಳಿಯ ಅನುಮೋದನೆಗೆ ಅವಶ್ಯವಿರುವ ಬೋಧಕ ಸಿಬ್ಬಂದಿ ಹುದ್ದೆಗಳನ್ನು ಭರ್ತಿಮಾಡಲು ಸಿಬ್ಬಂದಿ ನೇಮಕಾತಿ ಸಮಿತಿ ಮೂಲಕ ದಿನಾಂಕ 15.12.2010ರಂದು ನೇರ ಸಂದರ್ಶನವನ್ನು ಜರುಗಿಸಿ ಆಯ್ಕೆ ಮಾಡಲಾದ ಒಟ್ಟು 26 ವಿವಿಧ ಬೋಧಕ ಸಿಬ್ಬಂದಿ ಹುದ್ದೆಗಳ ನೇಮಕಾತಿ ಪಟ್ಟಿಯನ್ನು ಮತ್ತು ನೇಮಕಾತಿ ಸಮಿತಿ ಸಭಾನಡುವಳಿಯನ್ನು ಪರಿಶೀಲಿಸಿ ಅನುಮೋದಿಸಲಾಯಿತು. ಹಾಗು ಇನ್ನು ಖಾಲಿ ಇರುವ 52 ಬೋಧಕ ಸಿಬ್ಬಂದಿ ಹುದ್ದೆಗಳನ್ನು ಜರೂರಾಗಿ ಪತ್ರಿಕಾ ಪ್ರಕಟಣೆಯ ಮೂಲಕ ನಿಯಮಾನುಸಾರ ಭರ್ತಿಮಾಡಿಕೊಳ್ಳಲು ನಿರ್ದೇಶಕರಿಗೆ ಸೂಚಿಸಲಾಯಿತು.

| ಕ್ರಮ ಸಂಖ್ಯೆ | ಹೆಸರು | ಹುದ್ದೆಯ ವಿವರ | ವಿಭಾಗ |
|---|---|---|---|
| 1 | ಡಾ. ವಿಜಯ ಕೃಷ್ಣ | ಪ್ರಾಧ್ಯಾಪಕರು | ಶರೀರ ಕ್ರಿಯಾಶಾಸ್ತ್ರ ವಿಭಾಗ |
| 2 | ಡಾ. ಅನಿಲ್ ಮ್ಯಾಗೇರಿ | ಸಹ ಪ್ರಾಧ್ಯಾಪಕರು | ರೋಗ ನಿರ್ಧಾರಕ ಶಾಸ್ತ್ರ ವಿಭಾಗ |
| 3 | ಡಾ. ರಮೇಶ್. ಬಿ.ಹೆಚ್ | ಸಹ ಪ್ರಾಧ್ಯಾಪಕರು | ರೋಗ ನಿರ್ಧಾರಕ ಶಾಸ್ತ್ರ ವಿಭಾಗ |
| 4 | ಡಾ. ಚಂದನ್. ಡಿ. ಸಬಲೆ | ಸಹ ಪ್ರಾಧ್ಯಾಪಕರು | ಮೀಣಿ ಜೀವ ಶಾಸ್ತ್ರ ವಿಭಾಗ |
| 5 | ಡಾ. ರಮೇಶ್ ಬಾಬು | ಸಹ ಪ್ರಾಧ್ಯಾಪಕರು | ಮಾನಸಿಕ ತಜ್ಞ ವಿಭಾಗ |
| 6 | ಡಾ. ನರೇಶ್. ಟಿ. ಗವಾಸ್ಕರ್ | ಸಹ ಪ್ರಾಧ್ಯಾಪಕರು | ಪ್ರಸೂತಿ ಮತ್ತು ಸ್ತ್ರೀರೋಗ ವಿಭಾಗ |
| 7 | ಡಾ. ಜಿ.ಜಿ.ನಂದೂರ್‌ಕರ್ | ಸಹ ಪ್ರಾಧ್ಯಾಪಕರು | ರೇಡಿಯಾಲಜಿ ವಿಭಾಗ |
| 8 | ಡಾ. ಶಂಕರಪ್ಪ. ಎಂ | ಸಹ ಪ್ರಾಧ್ಯಾಪಕರು | ವೈದ್ಯ ಶಾಸ್ತ್ರ ವಿಭಾಗ |
| 9 | ಡಾ. ಅಬ್ದುಲ್ ಖದೀರ್. ಆರ್ | ಸಹ ಪ್ರಾಧ್ಯಾಪಕರು | ಕಿವಿ ಮೂಗು ಮತ್ತು ಗಂಟಲು ವಿಭಾಗ |
| 10 | ಡಾ. ಪಿ.ಎಸ್. ಸುಮನ್ ಬಾಬು | ಸಹಾಯಕ ಪ್ರಾಧ್ಯಾಪಕರು | ಚರ್ಮ ಮತ್ತು ಲೈಂಗಿಕ ತಜ್ಞ ವಿಭಾಗ |
| 11 | ಡಾ. ಶ್ರೀಧರ್. ಎನ್. ಎಕ್‌ಬೋಟೆ | ಸಹಾಯಕ ಪ್ರಾಧ್ಯಾಪಕರು | ಅರವಳಿಕೆ ವಿಭಾಗ |
| 12 | ಡಾ. ಬಾಬು ರಾಜೇಂದ್ರ ಪ್ರಸಾದ್ | ಹಿರಿಯ ಸ್ಥಾನಿಕರು | ವೈದ್ಯ ಶಾಸ್ತ್ರ ವಿಭಾಗ |
| 13 | ಡಾ. ಪರ್ವತ್ ರೆಡ್ಡಿ | ಹಿರಿಯ ಸ್ಥಾನಿಕರು | ವೈದ್ಯ ಶಾಸ್ತ್ರ ವಿಭಾಗ |
| 14 | ಡಾ. ಸೈಹಿದ್ ಶಾಹಿದ್ ಇರ್ಫಾನ್ | ಹಿರಿಯ ಸ್ಥಾನಿಕರು | ಶಸ್ತ್ರ ಚಿಕಿತ್ಸಾ ವಿಭಾಗ |
| 15 | ಡಾ. ಟಾಕಪ್ಪ. ಎನ್. ಜಿ | ಹಿರಿಯ ಸ್ಥಾನಿಕರು | ಶಸ್ತ್ರ ಚಿಕಿತ್ಸಾ ವಿಭಾಗ |
| 16 | ಡಾ. ರಾಘವೇಂದ್ರ | ಹಿರಿಯ ಸ್ಥಾನಿಕರು | ಮಾನಸಿಕ ತಜ್ಞ ವಿಭಾಗ |
| 17 | ಡಾ. ವಿಜಯ್‌ಕುಮಾರ್ ಸುಖಾಣಿ | ಹಿರಿಯ ಸ್ಥಾನಿಕರು | ಮಕ್ಕಳ ಶಾಸ್ತ್ರ ವಿಭಾಗ |
| 18 | ಡಾ. ಸಿದ್ಧರೂಢ ಭದ್ರಣ್ಣನವರ್ | ಹಿರಿಯ ಸ್ಥಾನಿಕರು | ಕೀಲು ಮತ್ತು ಎಲುಬು ವಿಭಾಗ |
| 19 | ಡಾ. ಚೈತ್ರ ನಾರಯಣ್ ನಾಯಕ್ | ಹಿರಿಯ ಸ್ಥಾನಿಕರು | ಪ್ರಸೂತಿ ಮತ್ತು ಸ್ತ್ರೀರೋಗ ವಿಭಾಗ |
| 20 | ಡಾ. ಅಮರದೇವ್ ಸರ್ದಾರ್ | ಹಿರಿಯ ಸ್ಥಾನಿಕರು | ಅರವಳಿಕೆ ವಿಭಾಗ |
| 21 | ಡಾ. ವಿರುಪಾಕ್ಷಪ್ಪ. ಟಿ | ಹಿರಿಯ ಸ್ಥಾನಿಕರು | ಅರವಳಿಕೆ ವಿಭಾಗ |
| 22 | ಡಾ. ಮೊಹಮ್ಮದ್ ಗೌಸ್ | ಹಿರಿಯ ಸ್ಥಾನಿಕರು | ಅರವಳಿಕೆ ವಿಭಾಗ |
| 23 | ಡಾ ರಜನಿ | ಹಿರಿಯ ಸ್ಥಾನಿಕರು | ರೇಡಿಯಾಲಜಿ ವಿಭಾಗ |
| 24 | ಡಾ. ಶ್ವೇತಾ.ವಿ | ಕಿರಿಯ ಸ್ಥಾನಿಕರು / ಬೋಧಕರು | – |
| 25 | ಡಾ. ಕುಸುಮ | ಕಿರಿಯ ಸ್ಥಾನಿಕರು / ಬೋಧಕರು | – |
| 26 | ಡಾ. ಗಾಯತ್ರಿ. ಟಿ. ಆರ್ | ತುರ್ತು ಚಿಕಿತ್ಸಾ ಘಟಕದ ವೈದ್ಯಾಧಿಕಾರಿಗಳು | – |

**ವಿಷಯ ಸೂಚಿ ಸಂಖ್ಯೆ. 5 : ರಿಮ್ಸ್ ಸಂಸ್ಥೆಯಲ್ಲಿ ಸಂಚಿತ ವೇತನದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಗ್ರೂಪ್ "ಸಿ" ವರ್ಗದ ನೌಕರರಿಗೆ ಹುದ್ದೆಯ ಮೂಲ ವೇತನಕ್ಕೆ ರೂ. 100/– ಕಡಿಮೆ ಮಾಡಿ ವೇತನ ಪಾವತಿಸುವ ಕುರಿತು.**

ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯಲ್ಲಿ ಕಳೆದ ನಾಲ್ಕು ವರ್ಷಗಳಿಂದ ಸಂಚಿತ ವೇತನದ ಮೇಲೆ ಕಾರ್ಯನಿರ್ವಹಿಸುತ್ತಿರುವ 33 ವಿವಿಧ ಬೋಧಕೇತರ ಸಿಬ್ಬಂದಿಗೆ ಅವರು ಕಾರ್ಯನಿರ್ವಹಿಸುತ್ತಿರುವ ಹುದ್ದೆಯ ಮೂಲ ವೇತನಕ್ಕೆ ರೂ. 100/–ಗಳನ್ನು ಕಡಿತಗೊಳಿಸಿ ದಿನಾಂಕ 01.01.2010ರಿಂದ ಅನ್ವಯವಾಗುವಂತೆ ವೇತನ ನಿಗದಿ ಪಡಿಸಿ ಪಾವತಿಸಲು ಆಡಳಿತ ಮಂಡಳಿಯು ಅನುಮೋದಿಸಲಾಯಿತು.

**ವಿಷಯ ಸೂಚಿ ಸಂಖ್ಯೆ. 6 : ಸಂಚಿತ ವೇತನದಲ್ಲಿ ಒರ್ವ ದೈಹಿಕ ಶಿಕ್ಷಕರು, ಎರಡು ಎಲೆಕ್ಟ್ರಿಸಿಯನ್ ಮತ್ತು ಎರಡು ಪ್ಲಂಬರ್‌ನ್ನು ನೇಮಿಸಿ ಹುದ್ದೆಯ ಮೂಲ ವೇತನಕ್ಕೆ ರೂ. 100/– ಕಡಿಮೆ ಮಾಡಿ ವೇತನ ಪಾವತಿಸಲು ಅನುಮೋದನೆ ನೀಡುವ ಬಗ್ಗೆ**

ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯಲ್ಲಿ ಅವಶ್ಯವಿರುವ ಒರ್ವ ದೈಹಿಕ ಶಿಕ್ಷಕರು, ಎರಡು ಎಲೆಕ್ಟ್ರಿಸಿಯನ್ ಹಾಗು ಎರಡು ಪ್ಲಂಬರ್‌ನ್ನು ಗುತ್ತಿಗೆ ಆಧಾರದ ಮೇಲೆ ತಾತ್ಕಲಿಕವಾಗಿ ನೇಮಿಸಿಕೊಳ್ಳಲು ಮತ್ತು ಹುದ್ದೆಯ ಮೂಲ ವೇತನಕ್ಕೆ ರೂ. 100/–ಗಳನ್ನು ಕಡಿತಗೊಳಿಸಿ ವೇತನ ಪಾವತಿಸಲು ಆಡಳಿತ ಮಂಡಳಿಯು ಅನುಮೋದಿಸಲಾಯಿತು.

**ವಿಷಯ ಸೂಚಿ ಸಂಖ್ಯೆ. 7: ರಿಮ್ಸ್ ಸಂಸ್ಥೆಯಲ್ಲಿ ಸಂಚಿತ ವೇತನದಲ್ಲಿ ಕಾರ್ಯನಿರ್ವಹಿಸುತ್ತಿರುವ "ಡಿ" ವರ್ಗದ ನೌಕರರಿಗೆ ಕಾರ್ಮಿಕ ಇಲಾಖೆಯಿಂದ ನಿಗದಿಪಡಿಸಿದ ಕನಿಷ್ಟ ವೇತನವನ್ನು ಹಾಗು ಫೆಬ್ರವರಿ – 2009ರಿಂದ ಅನ್ವಯ ವಾಗುವಂತೆ ವ್ಯತ್ಯಾಸದ ವೇತನವನ್ನು ಪಾವತಿಸಲು ಅನುಮೋದನೆ ನೀಡುವ ಬಗ್ಗೆ.**

ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯಲ್ಲಿ ಸಂಚಿತ ವೇತನದಲ್ಲಿ ಕಾರ್ಯನಿರ್ವಹಿಸುತ್ತಿರುವ ಒಟ್ಟು 78 ಗ್ರೂಪ್ ಡಿ ನೌಕರರಿಗೆ ಈಗ ಪಾವತಿಸುತ್ತಿರುವ ವೇತನ ರೂ. 2500/–ಗಳನ್ನು ಸೇರಿ ಕರ್ನಾಟಕ ಸರ್ಕಾರ ನಿಗದಿಪಡಿಸಿದ ಕಾರ್ಮಿಕ ಕನಿಷ್ಟ ವೇತನ ರೂ. 3617.30ಗಳನ್ನು ಪ್ರತಿ ಮಾಹೆಯಾನ ಪಾವತಿಸಲು ಮತ್ತು ಫೆಬ್ರವರಿ 2009 ರಿಂದ ಇದುವರೆಗೆ ಪಾವತಿಸಬೇಕಾಗಿರುವ ಕನಿಷ್ಟ ವೇತನದ ವ್ಯತ್ಯಾಸದ ಹಣವನ್ನು ಪಾವತಿಸಲು ಆಡಳಿತ ಮಂಡಳಿಯು ಅನುಮೋದಿಸಲಾಯಿತು.

**ವಿಷಯ ಸೂಚಿ ಸಂಖ್ಯೆ 8 : ಸದ್ಯ ರಿಮ್ಸ್ ಬೋಧಕ ಆಸ್ಪತ್ರೆಯಲ್ಲಿ ಸಂಗ್ರಹವಾಗುತ್ತಿರುವ ಬಳಕೆದಾರರ ನಿಧಿಯನ್ನು (User Charges) ಹೆಚ್ಚಿಸುವ ಬಗ್ಗೆ ಅನುಮೋದನೆ ನೀಡುವ ಕುರಿತು.**

ಬಳಕೆದಾರರ ನಿಧಿಯ ಕ್ಲಿನಿಕಲ್ ಶುಲ್ಕವನ್ನು ಹೆಚ್ಚಿಸಲು ಎಲ್ಲಾ ಸಂಸ್ಥೆಗಳಿಗೆ ಅನ್ವಯವಾಗುವಂತೆ ಸರ್ಕಾರದ ಮಟ್ಟದಲ್ಲಿ ಈಗಾಗಲೇ ಪ್ರಸ್ತಾವನೆ ಇರುವುದರಿಂದ ಒಟ್ಟಾಗಿ ಎಲ್ಲಾ ಸಂಸ್ಥೆಗಳ ಬಳಕೆದಾರರ ಶುಲ್ಕವನ್ನು ಹೆಚ್ಚಿಸಲು ತೀರ್ಮಾನಿಸಲಾಯಿತು.

**ವಿಷಯ ಸೂಚಿ ಸಂಖ್ಯೆ 9 : ರಿಮ್ಸ್ ಅವರಣದಲ್ಲಿ ನೂತನವಾಗಿ ನಿರ್ಮಾಣವಾಗುತ್ತಿರುವ ಬ್ಲಾಕ್ ಎ ಆಸ್ಪತ್ರೆಗೆ ಭೂಸ್ವಾಧಿನ ಪಡಿಸಿಕೊಂಡಿರುವ ಜಮೀನಿನ ಬಗ್ಗೆ ನ್ಯಾಯಲಯದ ಐತೀರ್ಪಿನಂತೆ ಭೂ ಪರಿಹಾರ ಪಾವತಿಸುವ ಕುರಿತು.**

ಭೂಸ್ವಾದಿನ ಪಡಿಸಿಕೊಂಡಿರುವ ಜಮೀನಿನ ಬಗ್ಗೆ ನ್ಯಾಯಲಯದ ಐತೀರ್ಪಿನಂತೆ ಭೂ ಪರಿಹಾರ ಪಾವತಿಸುವ ಕುರಿತು ರಿಮ್ಸ್ ಸಂಸ್ಥೆಯ ಕಾನೂನು ಸಲಹೆಗಾರರಿಂದ ಮಾಹಿತಿ ಪಡೆಯಲಾಯಿತು. ಮಾನ್ಯ ಸಹಾಯಕ ಆಯುಕ್ತರು, ರಾಯಚೂರು ಇವರಿಂದ ಸದರಿ ದಾವೆಗೆ ಸಂಬಂಧಿಸಿದಂತೆ No Appeal Copy ಯನ್ನು ಪಡೆದು ಸರ್ಕಾರಕ್ಕೆ ಪೂರ್ಣ ಮಾಹಿತಿಯೊಂದಿಗೆ ಪ್ರಸ್ತಾವನೆಯನ್ನು ಸಲ್ಲಿಸಲು ರಿಮ್ಸ್ ಕಾನೂನು ಸಲಹೆಗಾರರಿಗೆ ಸೂಚಿಸಲಾಯಿತು.

**ವಿಷಯ ಸೂಚಿ ಸಂಖ್ಯೆ 10 : ಅಧ್ಯಕ್ಷರ ಅಪ್ಪಣೆಯ ಮೇರೆಗೆ ಇನ್ನಿತರ ವಿಷಯಗಳು**

1) **ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಬೋಧಕ ಸಿಬ್ಬಂದಿಗೆ ಎಐಸಿಟಿಸಿಇ ವೇತನ ಪಾವತಿಸುವ ಬಗ್ಗೆ.**

ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ವೈದ್ಯರು ಎಐಸಿಟಿಸಿಇ ವೇತನ ಪಾವತಿಸಲು ವಿಳಂಬವಾಗುತ್ತಿರುವ ಬಗ್ಗೆ ಕಪ್ಪು ಪಟ್ಟಿ ಧರಿಸಿ ಬೇಡಿಕೆ ಈಡೇರಿಕೆಗಾಗಿ ಆಗ್ರಹಿಸುತ್ತಿರುವುದನ್ನು ನಿರ್ದೇಶಕರು ಅಧ್ಯಕ್ಷರ ಗಮನಕ್ಕೆ ತಂದರು. ಈ ಪ್ರಸ್ತಾವನೆಯು ಸದ್ಯ ಸರ್ಕಾರದ ಮಟ್ಟದಲ್ಲಿದಲ್ಲಿರುವುದರಿಂದ ಆರ್ಥಿಕ ಇಲಾಖೆಯ ಅನುಮೋದನೆ ಮೇರೆಗೆ ಕ್ರಮ ಕೈಗೊಳ್ಳಲಾಗುವುದೆಂದು ಆಡಳಿತ ಮಂಡಳಿಯು ಸೂಚಿಸಿತು.

2) **ರಿಮ್ಸ್ ಸಂಸ್ಥೆಗೆ ಭದ್ರತಾ ಸಿಬ್ಬಂದಿಯ ಬದಲಾಗಿ ಹೋಂ ಗಾರ್ಡ್ಸ್ ಸಿಬ್ಬಂದಿಯನ್ನು ನೇಮಿಸುವ ಕುರಿತು.**

ಈಗಾಗಲೇ ಸರ್ಕಾರದ ಮಟ್ಟದಲ್ಲಿ ಜರುಗಿದ ಅನೇಕ ಸಭೆಗಳಲ್ಲಿ ನಿರ್ಣಯಿಸಿರುವಂತೆ ಹೊರಗುತ್ತಿಗೆಯ ಮೂಲಕ ಪಡೆಯುತ್ತಿರುವ ಭದ್ರತಾ ಸಿಬ್ಬಂದಿಯ ಸೇವೆಯನ್ನು ರದ್ದುಗೊಳಿಸಿ ಹೋಂಗಾರ್ಡ್ಸ್ ಸಿಬ್ಬಂದಿಗಳನ್ನು ನೇಮಿಸಿಕೊಳ್ಳಲು ಆಡಳಿತ ಮಂಡಳಿಯು ನಿರ್ದೇಶಕರಿಗೆ ಸೂಚಿಸಲಾಯಿತು.

ವಂದನೆಗಳೊಂದಿಗೆ ಆಡಳಿತ ಮಂಡಳಿ ಸಭೆಯು ಮುಕ್ತಾಯವಾಯಿತು.

(ಶ್ರೀ ಪಿ.ಎಂ. ವಿಠ್ಠಲಮೂರ್ತಿ)
ಸರ್ಕಾರದ ಕಾರ್ಯದರ್ಶಿಗಳು,
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ,
ವೈದ್ಯಕೀಯ ಶಿಕ್ಷಣ,
ಹಾಗೂ ಉಪಾಧ್ಯಕ್ಷರು,
ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ,
ರಾಯಚೂರು

(ಶ್ರೀ ಎಸ್.ಎ. ರಾಮದಾಸ್),
ವೈದ್ಯಕೀಯ ಶಿಕ್ಷಣ ಸಚಿವರು, ಕರ್ನಾಟಕ ಸರ್ಕಾರ,
ಹಾಗೂ ಅಧ್ಯಕ್ಷರು,
ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ,
ರಾಯಚೂರು.